ಮಾಡಬೇಕೆನ್ನುವುದು ನಮ್ಮ ಇಲಾಖೆಯ ಉದ್ದೇಶ. ಆದರೂ ಅದನ್ನು ಬೇರೆ ಇಲಾಖೆಗಳಲ್ಲಿ ಕೇಳುತ್ತಿದ್ದಾರೆಂಬುದನ್ನು ನಾವು ಕೇಳಿದ್ದೇವೆ ಮತ್ತು ನಮ್ಮ ಗಮನಕ್ಕೂ ಬಂದಿದೆ. ಆ ಕಾರಣಕ್ಕಾಗಿ ಬಿಪಿಎಲ್ ಕಾರ್ಡಿಗಾಗಿ ಹಾಹಾಕಾರ. ಮೊದಲು ಸೈಕಲ್‌ಗಾಗಿ ಕೇಳಿದರು, ಆಮೇಲೆ ಗಂಗಾ ಕಲ್ಯಾಣಕ್ಕೆ ಕೇಳುತ್ತಾರೆ, ಆಸ್ಪತ್ರೆಗಳಲ್ಲಿ ಕೇಳುತ್ತಾರೆ, ಆ ಕಾರಣಕ್ಕಾಗಿ ಇಷ್ಟೊಂದು ಒತ್ತಡವೆಂದು ಸರ್ಕಾರದ ಗಮನಕ್ಕೂ ಬಂದಿದೆ, ಅದನ್ನು ಮುಂದಿನ ದಿವಸಗಳಲ್ಲಿ ಪರಿಶೀಲಿಸುತ್ತೇವೆ.

ಶ್ರೀ ಎನ್.ಎಲ್.ನರೇಂದ್ರಬಾಬು :– ಬೆಂಗಳೂರು ನಗರದ ಶಾಸಕರ ಸಭೆಯನ್ನು ವಿಶೇಷವಾಗಿ ಕರೆಯುತ್ತೇವೆಂದು ಹೇಳಿದಿರಿ, ಕರೆದಿಲ್ಲ. ಆಗಿರುವುದನ್ನು ಕೊಡುವ ಪ್ರಕ್ರಿಯೆ ಚಾಲನೆ ಮಾಡಿ, ಇವತ್ತಿನಿಂದ ಮಾಡುತ್ತೀರೋ, ನಾಳೆ ಮಾಡುತ್ತೀರೊ, ಚುನಾವಣೆ ಕೋಡ್ ಆಫ್ ಕಾಂಡಕ್ಟ್ ಬಂದರೆ ಮತ್ತೆ ಸಮಸ್ಯೆಯಾಗುತ್ತದೆ, ದಯವಿಟ್ಟು ನಿಮ್ಮ ಕಾಲದಲ್ಲಾದರೂ ಮಾಡಿ.

ಅಧ್ಯಕ್ಷರು :– ಸಭೆಯನ್ನು ಕರೆಯಿರಿ.

ಶ್ರೀ ಹೆಚ್.ಹಾಲಪ್ಪ :– ಅಧ್ಯಕ್ಷರೆ, ಖೋಡಿತಾ ಮಾಡುತ್ತೇವೆ, ಈಗ ಕೊಡುವುದಕ್ಕೆ ಪ್ರಾರಂಭ ಮಾಡಿದ್ದೇವೆ, ನಮ್ಮ ಅಧಿಕಾರಿಗಳನ್ನು ಕರೆಯಿಸಿ ಅವರ ಗಮನಕ್ಕೆ ಇದನ್ನು ತರುತ್ತೇವೆ, ಪ್ರಕ್ರಯೆ ನಡೆಯುತ್ತಿದೆ. ತಮ್ಮ ಕ್ಷೇತ್ರದ ಪಾಲಿಗೆ 5,588 ಕಾರ್ಡುಗಳೇನು ಬಂದಿವೆ, ಅವನ್ನು ಈ ಕ್ಷಣದಲ್ಲೇ ತಾವು ಕೊಡಬಹುದು, ಈ ಬಗ್ಗೆ ನಮ್ಮ ಅಧಿಕಾರಿಗಳಿಗೆ ನಿರ್ದೇಶನವನ್ನು ಕೊಡುತ್ತೇನೆ.

ಶ್ರೀ ಎನ್.ಎಲ್.ನರೇಂದ್ರಬಾಬು :– ಅರ್ಜಿ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತದೆಯೇ? ಅಪ್ಲಿಕೇಷನ್ ತೆಗೆದುಕೊಳ್ಳುವುದನ್ನೇ ನಿಲ್ಲಿಸಿಬಿಟ್ಟಿದ್ದಾರೆ.

ಶ್ರೀ ಹೆಚ್.ಹಾಲಪ್ಪ :– ಇದು ನಿರಂತರವಾಗಿ ನಡೆಯುವಂಥದ್ದು.

ಅಧ್ಯಕ್ಷರು :– ನರೇಂದ್ರ ಬಾಬುರವರೆ, ನಿರಂತರವಾಗಿ 8–10 ವರ್ಷದಿಂದ ನಡೆಯುತ್ತಿದೆ.

ಶ್ರೀ ಯು.ಟಿ.ಖಾದರ್ :– ಅಧ್ಯಕ್ಷರೆ, ಗ್ಯಾಸ್ ಇದ್ದವರಿಗೆ 2 ಲೀಟರ್ ಸೀಮೆ ಎಣ್ಣೆ ಕೊಡಲಾಗುವುದೆಂದು ಹೇಳಿದ್ದಾರೆ, ಎಲ್ಲಿಯೂ ಕೂಡ ಸಿಗುತ್ತಿಲ್ಲ.

ಶ್ರೀ ಹೆಚ್.ಹಾಲಪ್ಪ :– ಹಿಂದೆ ಆ ಬೇಡಿಕೆಯನ್ನು ಇಟ್ಟಿದ್ದರು, ಪರಿಶೀಲಿಸುತ್ತೇವೆಂದು ಹೇಳಿದ್ದೆವು, ಆದರೆ ಇತ್ತೀಚಿನ ಅಧ್ಯಯನದಿಂದ ಅದು ಸಾಧ್ಯವಿಲ್ಲವೆಂಬುದು ಗೊತ್ತಾಗಿದೆ.

ಶ್ರೀ ಯು.ಟಿ.ಖಾದರ್ :– ಹಾಗಾದರೆ ಕೊಡುವುದಿಲ್ಲವೇ?

ಶ್ರೀ ಹೆಚ್.ಹಾಲಪ್ಪ :– ಇಲ್ಲ.

ಉಡುಪಿಯಲ್ಲಿ ಜಿಲ್ಲಾ ಸಹಕಾರಿ ಬ್ಯಾಂಕ್ ರಚನೆಯ ಬಗ್ಗೆ.

62(405) ಶ್ರೀ ರಘುಪತಿ ಭಟ್ ಕೆ. (ಉಡುಪಿ)

ಅ) ಉಡುಪಿಯಲ್ಲಿ ಜಿಲ್ಲಾ ಸಹಕಾರಿ ಬ್ಯಾಂಕ್ ರಚನೆಯ ವಿಚಾರದಲ್ಲಿ ಸರ್ಕಾರ ಯಾವ ಹಂತ ತಲುಪಿದೆ?

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ,. ಮಂಗಳೂರು ಇದನ್ನು ವಿಭಜಿಸಿ ಉಡುಪಿಯಲ್ಲಿ ಹೊಸ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ್ನು ಸ್ಥಾಪಿಸಲು ಕ್ರಮಕೈಗೊಳ್ಳುವಂತೆ ಕರ್ನಾಟಕ ಸಹಾಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30ಬಿ(1)ರ ಅಡಿಯಲ್ಲಿ ಸರ್ಕಾರಕ್ಕೆ ದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ: 02.02.2009 ರಂದು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ,. ಮಂಗಳೂರು ಇದರ ಆಡಳಿತ ಸಮಿತಿಗೆ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ನಿರ್ದೇಶತ ನೀಡಲಾಗಿರುತ್ತದೆ.

ಸದರಿ ಆದೇಶವನ್ನು ಪ್ರಶ್ನಿಸಿ ಗೌರವಾನ್ವಿತ ಶ್ರೇಷ್ಠ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 3699/ 2009 3700/ 2009 ಹಾಗೂ 3736/ 2009 ಗಳನ್ನು ಸಲ್ಲಿಸಲಾಗಿದ್ದು ಸದರಿ ರಿಟ್ ಅರ್ಜಿಗಳಲ್ಲಿ ಗೌರವಾನ್ವಿತ ಶ್ರೇಷ್ಠ ನ್ಯಾಯಾಲಯವು ಸರ್ಕಾರದ ಆದೇಶಕ್ಕೆ ತಡೆಯಾಜ್ಞೆ ನೀಡಿರುತ್ತದೆ.

ಆ) ಇಷ್ಟೊಂದು ವಿಳಂಬಕ್ಕೆ ಕಾರಣಗಳೇನು?

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ,. ಮಂಗಳೂರು ಇದನ್ನು ವಿಭಜಿಸಿ ಉಡುಪಿ ಜಿಲ್ಲೆಯಲ್ಲಿ ನೂತನ ಡಿಸಿಸಿ ಬ್ಯಾಂಕ್‌ನ್ನು ಸ್ಥಾಪಿಸುವ ಪ್ರಸ್ತಾವವು ಸದರಿ ಬ್ಯಾಂಕಿನ ದಿನಾಂಕ: 22.08.1999, 25.09.2004 ಹಾಗೂ 01.12.2008 ರಮದು ನಡೆದ ಮಹಾಸಭೆಯಲ್ಲಿ ಮಂಡನೆಯಾಗಿ ವಿಭಜನೆಗೆ ಸಮ್ಮತಿ ದೊರೆತಿರುವುದಿಲ್ಲ ಯಾವುದೇ ಡಿಸಿಸಿ ಬ್ಯಾಂಕ್‌ನ್ನು ವಿಭಜಿಸಿ ಹೊಸ ಡಿಸಿಸಿ ಬ್ಯಾಂಕನ್ನು ಸ್ಥಾಪನೆ ಮಾಡಬೇಕಾದಲ್ಲಿ ಕರ್ನಾಟಕ ಸಹಾಕಾರಿ ಸಂಘಗಳ ಅಧಿನಿಯಮ 1959ರ ಪ್ರಕರಣ 14ರ ಅಡಿ ಮಹಾಸಭೆಯು 2/3ನೇ ಬಹುಮತದ ನಿರ್ಣಯದ ಮೂಲಕ ಸದರಿ ವಿಭಜನೆಗೆ ಅಂಗೀಕಾರ ನೀಡಬೇಕಾಗಿರುತ್ತದೆ ಹಾಗೂ ಬ್ಯಾಂಕಿಂಗ್ ಪರಿಣತಿ ಹೊಂದಿದವರಿಂದ ಆರ್ಥಿಕ ಸಾಧ್ಯತಾ ವರದಿಯನ್ನು (economic feasibility study report) ಪಡೆದು ಲಗತ್ತಿಸಿ ಪ್ರಸ್ತಾವೆಯನ್ನು ನಬಾರ್ಡ್ ಮೂಲಕ ಆರ್.ಬಿ.ಐ.ಗೆ ಸಲ್ಲಿಸಿ ಅನುಮೋದನೆ ಪಡೆಯಬೇಕಾಗಿರುತ್ತದೆ. ಸಹಕಾರ ಸಂಘಗಳ ನಿಬಂಧಕರು ದಿನಾಂಕ: 09.01.2009 ರಂದು ನಬಾರ್ಡಿಗೆ ಪತ್ರ ಬರೆದು ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ್ನು ವಿಭಜಿಸಿ ಉಡುಪಿಯಲ್ಲಿ ಹೊಸ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನ್ನುಸ್ಥಾಪಿಸಲು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮೋದನೆ ಪಡೆಯುವಂತೆ ವಿನಂತಿಸಿದ್ದಾರೆ.

ಇ) ಉಡುಪಿ ನಾಗರೀಕರ ಬಹುದಿನಗಳ ಬೇಡಿಕೆಯಂತೆ ಯಾವಾಗ ಜಿಲ್ಲಾ ಸಹಕಾರಿ ಬ್ಯಾಂಕ್ ಸ್ಥಾಪನೆ ಮಾಡಲಾಗುವುದು?

ಗೌರವಾನ್ವಿತ ಶ್ರೇಷ್ಠ ನ್ಯಾಯಾಲಯದಲ್ಲಿ ಬಾಕಿ ಇರುವ ರಿಟ್ ಅರ್ಜಿಗಳು ಇತ್ಯರ್ಥವಾದ ನಂತರ ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮೋದನೆ

ದೊರೆತ ನಂತರ ಗೌರವಾನ್ವಿತ ಶ್ರೇಷ್ಠ ನ್ಯಾಯಾಲಯದ ತೀರ್ಪನ್ನು ಅನುಸರಿಸಿ ಮುಂದಿನ ಕ್ರಮಕ್ಕೆಗೊಳ್ಳಲಾಗುವುದು.

ಶ್ರೀ ಕೆ.ರಘುಪತಿ ಭಟ್ :– ಅಧ್ಯಕ್ಷರೆ, ಉತ್ತರವನ್ನು ಒದಗಿಸಿರುವುದಕ್ಕೆ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಮ್ಮ ಉಡುಪಿ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆಯಿಂದ ಪ್ರತ್ಯೇಕಗೊಂಡು 12 ವರ್ಷಗಳಾಗಿವೆ. ಉಡುಪಿ ಜಿಲ್ಲೆಗೆ ಪ್ರತ್ಯೇಕವಾಗಿ ಡಿಸಿಸಿ ಬ್ಯಾಂಕ್ ಆಗಬೇಕೆನ್ನುವುದನ್ನು ಹಿಂದೆ ಬಂದ ಎಲ್ಲಾ ಸರ್ಕಾರ ಮತ್ತು ಸಚಿವರುಗಳಲ್ಲಿ ಕೇಳಿಕೊಂಡು ಬಂದಿದ್ದೇವೆ. ಆದರೆ ಡಿಸಿಸಿ ಬ್ಯಾಂಕಿನ ಕೆಲವು ಸ್ಥಾಪಿತ ಹಿತಾಸಕ್ತಿಯಿಂದಾಗಿ 2/3 ಮೆಜಾರಿಟಿ ಬೇಕೆಂಬ ಕಾರಣಕ್ಕೆ ಅದು ನಮಗೆ ಕೈಗೂಡಲಿಲ್ಲ.ಅದನ್ನು ಮೀರಿ ನಮ್ಮ ಸಹಕಾರ ಸಚಿವರು ಈಗಾಗಲೇ 30ಬಿ ನಲ್ಲಿ ಉಡುಪಿ ಜಿಲ್ಲೆಗೆ ಪ್ರತ್ಯೇಕ ಡಿಸಿಸಿ ಬ್ಯಾಂಕ್ ಮಾಡುವುದಕ್ಕೆ ಡಿಸಿಸಿ ಬ್ಯಾಂಕಿಗೆ ಒಂದು ನೋಟೀಸ್ ಕೊಟ್ಟಿದ್ದಾರೆ. Government order issue ಆಗಿದೆ. ಅದಕ್ಕಾಗಿ ನಾನು ಪ್ರತ್ಯೇಕವಾಗಿ ಸಹಕಾರಿ ಸಚಿವರಿಗೆ ಮತ್ತು ಸರ್ಕಾರಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ, ನಮ್ಮ ಜಿಲ್ಲೆಯ ಮಟ್ಟಿಗೆ ಬಹಳ ಐತಿಹಾಸಿಕವಾದ ನಿರ್ಣಯವನ್ನು ಸಹಕಾರ ಸಚಿವರು ತೆಗೆದುಕೊಂಡಿದ್ದಾರೆ. ಮತ್ತೆ ರಿಸರ್ವ್ ಬ್ಯಾಂಕಿನ ಅನುಮತಿ ಸಿಕ್ಕಿದ ದಿವಸದಿಂದ ಡಿಸಿಸಿ ಬ್ಯಾಂಕ್ ಆರಂಭವಾಗುತ್ತದೆ ಎಂದು Government Order ನಲ್ಲಿ ಕೊಟ್ಟಿದ್ದಾರೆ. ಈಗಾಗಲೇ ಸಹಕಾರ ಸಂಘ ನಿಬಂಧಕರು ಅನುಮತಿಯ ಬಗ್ಗೆ ರಿಸರ್ವ್ ಬ್ಯಾಂಕಿಗೆ ಬರೆದಿದ್ದಾರೆ, ಅದು ಕೂಡ ಒಂದು ಅಭಿನಂದನೀಯವಾದ ಕೆಲಸವಾಗಿ ?. ಆದರೆ ಈಗ ನಾನು ಸರ್ಕಾರದಿಂದ ಏನು ಬಯಸುತ್ತಿದ್ದೇನೆಂದರೆ, ಇವತ್ತು ಡಿ ಸಿ ಬ್ಯಾಂಕಿನ ಆಡಳಿತ ಮಂಡಳಿ ಸರಿಯಾದ ಕ್ರಮವನ್ನು ತೆಗೆದುಕೊಳ್ಳದೆ ಉಡುಪಿ ಜಿಲ್ಲೆಯಲ್ಲಿ ಪ್ರತ್ಯೇಕವಾಗಿ ಮಾಡುವುದಕ್ಕೆ ಬೇರೆ ಬೇರೆ ಸ್ಥಾಪಿತ ಹಿತಾಸಕ್ತಿಗಳ ಕೈವಾಡದಿಂದಾಗಿ ಅವರು ಒಪ್ಪುತ್ತಿಲ್ಲ, ಆದರೂ ಕೂಡ ಸರ್ಕಾರ ಈ ನಿಟ್ಟಿನಲ್ಲಿ ದೃಢವಾದ ನಿಲುವನ್ನು ತೆಗೆದುಕೊಂಡಿದೆ, ಅದು ಅಭಿನಂದನೀಯವಾದ ಕೆಲಸ. ಈಗ ಡಿಸಿಸಿ ಬ್ಯಾಂಕ್ ಪ್ರತ್ಯೇಕವಾಗಿ ಆಗಬೇಕೆನ್ನುವ ನಿಲುವನ್ನು ಸರ್ಕಾರ ಸಚಿವ ಸಂಪುಟದಲ್ಲಿ ತೆಗೆದುಕೊಂಡಂಥ ಸಂದರ್ಭದಲ್ಲಿ, ಡಿಸಿಸಿ ಬ್ಯಾಂಕಿನವರು ತಕ್ಷಣ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಸೇರಿಸಿಕೊಂಡು ಚುನಾವಣೆಯನ್ನು ಮಾಡುವುದಕ್ಕೆ ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದಾರೆ. ನಾವು ಹೇಳುವುದೇನೆಂದರೆ, ಈಗಾಗಲೇ ಡಿಸಿಸಿ ಬ್ಯಾಂಕ್ ಆಗುವುದರ ಬಗ್ಗೆ ಸರ್ಕಾರದ ನಿರ್ಧಾರವಾಗಿದೆ. ಸಚಿವ ಸಂಪುಟದ ನಿರ್ಧಾರವಾದ ಮೇಲೆ ಚುನಾವಣೆಯಾಗುವುದು ಒಳ್ಳೆಯ ಕ್ರಮವಲ್ಲ, ಉಡುಪಿ ಜಿಲ್ಲೆ ಬೇರೆ ಆದ ಮೇಲೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಪ್ರತ್ಯೇಕ ಚುನಾವಣೆ ಮಾಡಬೇಕು. ಆದುದರಿಂದ ಅವರು ತಕ್ಷಣ ಮಾಡಲು ಹೊರಟಿರುವ ಚುನಾವಣೆಗೆ stay ಅನ್ನು ಕೊಡಬೇಕು ಮತ್ತು ಈ ವಿಷಯ ಕೋರ್ಟಿನಲ್ಲಿರುವುದರಿಂದ, ಕೋರ್ಟಿನಿಂದ ಏನು

ಆದೇಶ ಬರುತ್ತದೆ ಗೊತ್ತಿಲ್ಲ, ಆದುದರಿಂದ ಆ ಚುನಾವಣೆಗೆ ಸ್ಟೇ ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಲಕ್ಷ್ಮಣ ಎಸ್.ಸವದಿ :– ಸನ್ಮಾನ್ಯ ಶಾಸಕರು ಕೇಳಿರುವ ಉಪಪ್ರಶ್ನೆಗೆ ಕಾನೂನು ಸಲಹೆಯನ್ನು ಪಡೆದುಕೊಂಡು ಮುಂದಿನ ಅಗತ್ಯಕ್ರಮವನ್ನು ನಾವು ಖಂಡಿತವಾಗಿ ತೆಗೆದುಕೊಳ್ಳುತ್ತೇವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇವೆ.

ಅಧ್ಯಕ್ಷರು :– ಮಾನ್ಯ ಕೃಷಿ ಸಚಿವರು ಮಾನ್ಯ ವಿಶ್ವನಾಥ್ ಮಾಮುನಿಯವರ ಪ್ರಶ್ನೆಗೆ ಉತ್ತರ ಹೇಳಿ. ಮಾನ್ಯ ಚಂದ್ರಶೇಖರ ಮಾಮುನೀಯವರೇ ನಿಮ್ಮ ಪ್ರಶ್ನೆಗೆ ಕಾಲಾವಾಕಾಶ ಕೇಳಿದ್ದಾರೆ.

ಶ್ರೀ ವಿಶ್ವನಾಥ್ ಚಂದ್ರಶೇಖರ್ ಮಾಮನಿ :– ಮಾನ್ಯ ಅಧ್ಯಕ್ಷರೆ, 29.07.08 ಹಾಗೂ 24.11.08 ... ಏಳು ಮತ್ತು ಹನ್ನೊಂದನೇ ತಿಂಗಳಿನಿಂದ ನಾವು ಕೇಳುತ್ತಿದ್ದೇವೆ. ಸಕ್ಕರೆ ಕಾರ್ಖಾನೆಗಳವರು ರಸ್ತೆ ಕರ ಕೊಡಿ ಎಂದು ಕೇಳುತ್ತಿದ್ದೇವೆ.

ಅಧ್ಯಕ್ಷರು :– ಮಾನ್ಯ ಸಚಿವರು ಉತ್ತರ ಕೊಡುವುದಕ್ಕೆ ಏನಾದರೂ ತೊಂದರೆ ಇದೆಯೇ? ಏಕೆಂದರೆ ಅವರು ಹಿಂದೆಯೂ ಈ ಪ್ರಶ್ನೆಯನ್ನು ಕೇಳಿದ್ದರು ಎಂದು ಹೇಳುತ್ತಿದ್ದಾರೆ. ಈಗಲೂ ಉತ್ತರ ಬಂದಿಲ್ಲ. ಅದು ಏನೆಂದು ವಿಚಾರ ಮಾಡಿ ಪರಿಹಾರ ಹುಡುಕಿ. ಲಾಲಾಜಿ ಮೆಂಡನ್‌ರವರು ಬಂದಿಲ್ಲ.

ರೈತರಿಗೆ ನೀಡುವ ಬಿತ್ತನೆ ಬೀಜದ ಬೆಲೆ ನಿಗದಿ ಬಗ್ಗೆ.

65(60) ಶ್ರೀ.ಶಿವಲಿಂಗೇಗೌಡ, ಕೆ.ಎಂ. (ಅರಸೀಕೆರೆ)

ಶ್ರೀ ಎಸ್.ಎ.ರವೀಂದ್ರನಾಥ್. (ಕೃಷಿ ಸಚಿವರು)

ಅ) ರಾಜ್ಯದಲ್ಲಿ ರೈತರಿಂದ ಬಿತ್ತನೆ ಬೀಜವನ್ನು ತೀರಾ ಕಡಿಮೆ ಬೆಲೆಗೆ ಕೊಂಡುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರವು ರೈತರಿಗೆ ಸರಿಯಾದ ಬೆಲೆಯನ್ನು ನೀಡುವಲ್ಲಿ ಕೈಗೊಂಡಿರುವ ಕ್ರಮಗಳೇನು;

ರಾಜ್ಯದಲ್ಲಿ ರೈತರಿಂದ ಬಿತ್ತನೆ ಬೀಜವನ್ನು ತೀರಾ ಕಡಿಮೆ ಬೆಲೆಗೆ ಕೊಂಡುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಕರ್ನಾಟಕ ರಾಜ್ಯ ಬೀಜ ನಿಗಮವು ರೈತರಿಗೆ ಉತ್ತಮ ಬೆಲೆಯನ್ನು ನೀಡಿ ಬಿತ್ತನೆ ಬೀಜಗಳನ್ನು ಖರೀದಿಸುತ್ತಿದೆ.

ಆ) ರೈತರಿಗೆ ಬಿತ್ತನೆ ಬೀಜವನ್ನು ಸರ್ಕಾರವು ಮಾರಾಟ ಮಾಡುವಾಗ ಹೆಚ್ಚು ಬೆಲೆಯನ್ನು ನಿಗದಿಪಡಿಸಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;

ಇಲ್ಲ.

LA. V.S.P-22